## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 966+968 |
| ಮಾನ್ಯ ಸದಸ್ಯರ ಹೆಸರು | : | ಮಾನ್ಯ ಶ್ರೀಮತಿ ಹೇಮಲತಾ ನಾಯಕ್ ಹಾಗೂ ಮಾನ್ಯ ಶ್ರೀ ಶರವಣ ಟಿ.ಎ |
| ಉತ್ತರಿಸುವ ದಿನಾಂಕ | : | 14-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2022-23ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಮೀಸಲಿಟ್ಟ ಹಾಗೂ ಬಿಡುಗಡೆಯಾದ ಅನುದಾನವೆಷ್ಟು;</td><td>2022-23ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಡಿ ಮೀಸಲಿಟ್ಟ ಮತ್ತು ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.<br><br>(ರೂ. ಕೋಟಿಗಳಲ್ಲಿ)
<table>
<tr><th rowspan="2">ವರ್ಷ</th><th colspan="2">ಹಂಚಿಕೆ</th><th colspan="2">ಬಿಡುಗಡೆ</th></tr>
<tr><th>SCSP</th><th>TSP</th><th>SCSP</th><th>TSP</th></tr>
<tr><td>2022-23</td><td>21,671</td><td>8,418</td><td>21,176</td><td>8,035</td></tr>
<tr><td>2023-24</td><td>25,164</td><td>10,058</td><td>24,524</td><td>9,846</td></tr>
<tr><td>2024-25 (Feb-25ರ ಅಂತ್ಯಕ್ಕೆ)</td><td>27,674</td><td>11,448</td><td>22,551</td><td>8,348</td></tr>
</table>
</td></tr>
<tr><td>(ಆ)</td><td>ಈ ಅನುದಾನದಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ (ಜೂನ್-2024)ರ ಎಷ್ಟು ಮೊತ್ತವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿ ವರ್ಗಾಯಿಸಿದೆ; ವರ್ಗಾಯಿಸಿದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ; (2023-24 ಮತ್ತು 2024-25ನೇ ಸಾಲಿನ ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)</td><td rowspan="2">2023-24 ಮತ್ತು 2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಡಿ ಗ್ಯಾರಂಟಿ ಯೋಜನೆಗಳಿಗೆ ಹಂಚಿಕೆ ಮತ್ತು ಬಳಕೆ ಮಾಡಿರುವ ಅನುದಾನದ ವಿವರ ಹಾಗೂ ಸದರಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಎಸ್.ಸಿ./ಎಸ್.ಟಿ ಫಲಾನುಭವಿಗಳ ಸಂಖ್ಯಾ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>(ಇ)</td><td>2023-24 ಮತ್ತು 2024-25ನೇ ಸಾಲಿನ ಫೆಬ್ರುವರಿ-2025ರ ಅಂತ್ಯದವರೆಗೆ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ</td></tr>
</table>

| | | |
|---|---|---|
| | ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು) | |
| (ಈ) | ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ, ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಒಂದು ವೇಳೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಮಾಹಿತಿ ಇಲ್ಲದಿದ್ದರೆ, ಅವರು ಫಲಾನುಭವಿ ಆಗಿಲ್ಲದಿದ್ದರೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಹಾಗೂ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೆ; ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೆ; | ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಧಿನಿಯಮ 2013ರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮಗಳಿಗೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನವನ್ನು ಹಂಚಿಕೆ ಮಾಡಿ ಅನುಷ್ಠಾನಗೊಳಿಸಲು ಅವಕಾಶವಿದೆ.<br><br>ಆದ್ದರಿಂದ, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಿದ್ದು, ಸದರಿ ಮೊತ್ತವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮಾತ್ರ ವಿನಿಯೋಗಿಸಲಾಗುತ್ತಿದೆ. ಆದ್ದರಿಂದ ಕಾಯ್ದೆಯ ಉಲ್ಲಂಘನೆಯ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಉ) | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿರುವುದು ಈ ಜನಾಂಗಕ್ಕೆ ಮಾಡಿದ ಅನ್ಯಾಯವಲ್ಲವೇ; ಆ ವರ್ಗಗಳ ಶ್ರೇಯೋಭಿವೃದ್ಧಿಗೆ ಬಳಕೆ ಮಾಡಬೇಕಾದ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿದಂತೆ ಆಗುವುದಲ್ಲದೇ, ಇವರುಗಳ ಸಾಂವಿಧಾನಿಕ ಹಕ್ಕನ್ನು ಕಸಿದಂತೆ ಆಗುವುದಿಲ್ಲವೆ; | ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿಯಡಿ ಹಂಚಿಕೆ ಮಾಡಿರುವ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ವಿನಿಯೋಗಿಸಲಾಗುತ್ತದೆ.<br><br>ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ 2013 ರಲ್ಲಿ ಕಲಂ 2(ಸಿ) ಅಡಿ ಸಾಮಾನ್ಯ ಸ್ಕೀಮ್‌ಗಳು ಅಂದರೆ, "ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳನ್ನು ಒಳಗೊಂಡಂತೆ ಎಲ್ಲಾ ಸಾಮಾಜಿಕ ಸಮುದಾಯಗಳಿಗೆ ಪ್ರಯೋಜನವಾಗುವಂತಹ ಇಲಾಖೆಗಳ ವಾರ್ಷಿಕ ಯೋಜನೆಗಳಲ್ಲಿ ಒಳಗೊಂಡಿರುವ ಸ್ಕೀಮ್‌ಗಳು" ಎಂದು ಇರುತ್ತದೆ.<br><br>ಸದರಿ ಕಾಯ್ದೆಯ ಕಲಂ 7(ಸಿ) ಯಡಿ ``ಸಾಮಾನ್ಯ ಸಾಮಾಜಿಕ ವಲಯದ ಸ್ಕೀಮುಗಳಿಗೆ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡದ ವ್ಯಕ್ತಿಗಳಿಗೆ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡದ ಕುಟುಂಬಗಳಿಗೆ, ಇತರರ |
| (ಊ) | SCSP/TSP ಯೋಜನೆಯಲ್ಲಿ ಮೀಸಲಿರಿಸಿದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲು ಕಾಯ್ದೆಯಲ್ಲಿ ಅವಕಾಶ ಇದೆಯೇ; | |

| | | |
|---|---|---|
| | ಇಲ್ಲದಿದ್ದಲ್ಲಿ, ಸರ್ಕಾರ ಸದರಿ ಅನುದಾನವನ್ನು ಯಾವ ಆಧಾರದ ಮೇಲೆ ಗ್ಯಾರಂಟಿಗಳಿಗೆ ಬಳಸಿಕೊಳ್ಳಲಾಗುತ್ತಿದ್ದು ಈ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗದುಕೊಳ್ಳುವುದೇ? | ಜೊತೆಯಲ್ಲಿ ಪ್ರಯೋಜನವಾಗುವಂತಿದ್ದರೆ, ಸ್ಕೀಮಿನ ವೆಚ್ಚವನ್ನು, ಎಸ್.ಸಿ/ಎಸ್.ಟಿ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿಯಲ್ಲಿ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಅದರಂತೆ, ಸದರಿ ಸೆಕ್ಷನ್ 7(ಸಿ) ಪ್ರಕಾರ ಕಾಯ್ದೆಯ ಅನುಷ್ಠಾನದ ಪ್ರಾರಂಭದಿಂದಲೂ ಶಾಲಾ ಶಿಕ್ಷಣ, ಉನ್ನತ ಶಿಕ್ಷಣ, ಆರೋಗ್ಯ, ವೈದ್ಯಕೀಯ ಶಿಕ್ಷಣ, ಕೃಷಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರ್.ಡಿ.ಪಿ.ಆರ್, ಇಂಧನ, ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಕೌಶಲ್ಯಾಭಿವೃದ್ಧಿ, ಸಾರಿಗೆ, ಇಂಧನ ಇತ್ಯಾದಿ ಇಲಾಖೆಗಳ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಫಲಾನುಭವಿಗಳಾಗಿರುವುದರಿಂದ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನವನ್ನು ಎಸ್.ಸಿ/ಎಸ್.ಟಿ ಜನರಿಗೆ ಮಾತ್ರ ವಿನಿಯೋಗಿಸಲು ಹಂಚಿಕೆ ಮಾಡಲಾಗುತ್ತಿದೆ.<br><br>ಎಸ್.ಸಿ.ಎಸ್.ಪಿ/ಟಿ.ಎಸ್.ಪಿಯಡಿ ಸೌಲಭ್ಯವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಒದಗಿಸಲಾಗುತ್ತಿದೆಯೇ ಹೊರತು ಈ ಅನುದಾನವನ್ನು ಇತರರಿಗೆ ಬಳಕೆ ಮಾಡುತ್ತಿಲ್ಲ. |

**ಸಕಇ 230 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಹಾಗೂ ಶ್ರೀ ಶರವಣ ಟಿ.ಎ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ - **966+968 ಗೆ ಅನುಬಂಧ-1**

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗಳಡಿ ಗ್ಯಾರಂಟಿ ಕಾರ್ಯಕ್ರಮಗಳಿಗೆ ಹಂಚಿಕೆ ಮತ್ತು ಬಳಕೆ ಮಾಡಿರುವ ಅನುದಾನದ ವಿವರ ಈ ಕೆಳಗಿನಂತಿದೆ.

**2023-24**

(ರೂ. ಕೋಟಿಗಳಲ್ಲಿ)

| ಕ್ರ.ಸಂ | ಯೋಜನೆ | ಹಂಚಿಕೆ | | ವೆಚ್ಚ | | ಫಲಾನುಭವಿಗಳ ಸಂಖ್ಯೆ | |
|---|---|---|---|---|---|---|---|
| | | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| 1 | ಗೃಹಲಕ್ಷ್ಮಿ | 3,500.00 | 1,575.00 | 3500.00 | 1574.95 | 22,45,391 | 8,66,983 |
| 2 | ಅನ್ನಭಾಗ್ಯ | 1,391.28 | 584.54 | 1386.92 | 583.59 | 60,01,209 | 26,27,989 |
| 3 | ಶಕ್ತಿ ಯೋಜನೆ | 640.00 | 288.00 | 640.00 | 288.00 | 2011 ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 52.10 ಲಕ್ಷ ಹಾಗೂ ಪರಿಶಿಷ್ಟ ಪಂಗಡದ 21.42 ಲಕ್ಷ ಮಹಿಳಾ ಜನ ಸಂಖ್ಯೆ ಇರುತ್ತದೆ. ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಯಡಿ 2023-24ನೇ ಸಾಲಿನಲ್ಲಿ ಇದುವರೆಗೆ 183.07 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದು, ಅದರಲ್ಲಿ ಜಾತಿವಾರು ಮಾಹಿತಿ ಸಂಗ್ರಹಿಸಿರುವುದಿಲ್ಲ. ಆದರೆ, ಎಸ್.ಸಿ/ ಎಸ್.ಟಿ ಮಹಿಳಾ ಪ್ರಯಾಣಿಕರು ಸಹ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ. | |
| 4 | ಗೃಹ ಜ್ಯೋತಿ | 1,570.00 | 740.00 | 1570.00 | 740.00 | 2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 21.78 ಲಕ್ಷ ಎಸ್. ಸಿ. ಕುಟುಂಬ ಹಾಗೂ 8.76 ಲಕ್ಷ ಎಸ್. ಟಿ. ಕುಟುಂಬಗಳು ಇರುತ್ತವೆ. ಇಂಧನ ಇಲಾಖೆಯ ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲಾ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. | |
| 5 | ಯುವನಿಧಿ | 47.50 | 20.00 | 2.59 | 1.11 | 4,751 | 2,107 |
| ಒಟ್ಟು | | 7,148.78 | 3,207.54 | 7,099.51 | 3,187.65 | | |

## 2024-25

(ರೂ. ಕೋಟಿಗಳಲ್ಲಿ)

| ಕ್ರ.ಸಂ | ಯೋಜನೆ | ಹಂಚಿಕೆ | | ವೆಚ್ಚ (ಫೆಬ್ರವರಿ-2025 ರ ಅಂತ್ಯಕ್ಕೆ) | | ಫಲಾನುಭವಿಗಳ ಸಂಖ್ಯೆ | |
|---|---|---|---|---|---|---|---|
| | | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| 1 | ಗೃಹಲಕ್ಷ್ಮಿ | 5,546.53 | 2,335.38 | 3514.79 | 1327.46 | 22,45,391 | 8,66,983 |
| 2 | ಅನ್ನಭಾಗ್ಯ | 1,539.18 | 648.41 | 907.11 | 420.6 | 60,44,090 | 26,97,261 |
| 3 | ಶಕ್ತಿ ಯೋಜನೆ | 1,001.00 | 450.45 | 917.58 | 412.91 | 2011 ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 52.10 ಲಕ್ಷ ಹಾಗೂ ಪರಿಶಿಷ್ಟ ಪಂಗಡದ 21.42 ಲಕ್ಷ ಮಹಿಳಾ ಜನ ಸಂಖ್ಯೆ ಇರುತ್ತದೆ. ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಇದುವರೆಗೆ 223.21 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದು, ಅದರಲ್ಲಿ ಜಾತಿವಾರು ಮಾಹಿತಿ ಸಂಗ್ರಹಿಸಿರುವುದಿಲ್ಲ. ಆದರೆ, ಎಸ್.ಸಿ/ ಎಸ್.ಟಿ ಮಹಿಳಾ ಪ್ರಯಾಣಿಕರು ಸಹ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ. | |
| 4 | ಗೃಹ ಜ್ಯೋತಿ | 1,770.45 | 815.48 | 1532.77 | 697.79 | 2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 21.78 ಲಕ್ಷ ಎಸ್. ಸಿ. ಕುಟುಂಬ ಹಾಗೂ 8.76 ಲಕ್ಷ ಎಸ್. ಟಿ. ಕುಟುಂಬಗಳು ಇರುತ್ತವೆ. ಇಂಧನ ಇಲಾಖೆಯ ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲಾ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. | |
| 5 | ಯುವನಿಧಿ | 123.50 | 52.50 | 46.81 | 19.74 | 28,234 | 12,308 |
| ಒಟ್ಟು | | 9,980.66 | 4,302.22 | 6,919.06 | 2,878.50 | | |